ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅಲ್ಲಿ 'ಡಿ' ಗ್ರೂಪ್ ನೌಕರರ ಸಹಕಾರ ಸಂಘ ಎಂದು ಅದಕ್ಕೆ ನಾಮಕರಣ ಆಗಿದೆ. ಆದರೆ ಅದರಲ್ಲಿ ಯಾವುದೇ ನೌಕರರು ಕೂಡ ನಿವೇಶನಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. ಅಲ್ಲಿ ಕಾನೂನು ರೀತಿಯಲ್ಲಿ ಅವರು ಸೈಟುಗಳನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಯಾವುದೇ ರೀತಿಯ ಲೋಪಗಳಾಗಿಲ್ಲ. ನಿಮಗೆ ಅಲ್ಲಿ ಲೋಪದೋಷಗಳಾಗಿರುವುದು ಕಂಡುಬಂದಿದ್ದರೆ ಮನವರಿಕೆಯಾಗಿದ್ದರೆ ನನಗೆ ನೇರವಾಗಿ ಕಳುಹಿಸಿಕೊಡಿ. ನಾವು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ರಸ್ತೆ ದುರಸ್ತಿ

75 (585) ಶ್ರೀ ತುಕಾರಾಮ್ ಇ. (ಸಂಡೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆಯಲ್ಲಿ ದುರಸ್ತಿ ಕಾಣದೆ ಕಳೆದ ಒಂದೂವರೆ ವರ್ಷದಿಂದ ವಾಹನ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಕಳೆದ ಎರಡು ವರ್ಷಗಳ ವಿವರಗಳನ್ನು ಒದಗಿಸುವುದು) ;

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ; (ವಿವರ ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆ ಸಂಪೂರ್ಣ ಹದಗೆಟ್ಟು, ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿವಿಧ ಲೆಕ್ಕ ಶೀರ್ಷಿಕೆವಾರು ಡಾಂಬರೀಕರಣಕ್ಕೆ ಪಾವತಿಯಾಗಿರುವ ವಿವರಗಳು ಈ ಕೆಳಗಿನಂತೆ ಇವೆ:

ಕ್ರ. ಸಂ.	ಅನುಮೋದನೆ ಯಾದ ವರ್ಷ	ಯೋಜನೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ
1	2009–10	5054–ಇತರ ರಸ್ತೆ ನಿರ್ಮಾಣ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 20.00 ರಿಂದ 24.00	50.00
2	2009–10	5054–ವಿಶೇಷ ಅಭಿವೃದ್ಧಿ ಯೋಜನೆ– ಇತರ ರಸ್ತೆಗಳ ನಿರ್ಮಾಣ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 0.00 ರಿಂದ 1.00	62.01
3	2009–10	5054–ಸುವರ್ಣ ರಸ್ತೆ ವಿಕಾಸ ಯೋಜನೆ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 24.00 ರಿಂದ 26.00	104.16

ಅಲ್ಲದೇ 2010–11ನೇ ಸಾಲಿನಲ್ಲಿ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಸದರಿ ರಸ್ತೆ ಸುಧಾರಣೆಗೆ ಸರ್ಕಾರದ ಅನುಮತಿಯೊಂದಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ರೂ. 96.50 ಕೋಟಿಗಳ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಅಭಿವೃದ್ಧಿಗೆ ಪರಿಗಣಿಸಿರುವ ರಸ್ತೆಯ ಉದ್ದ 29.00 ಕಿ.ಮೀ. ಗಳಾಗಿರುತ್ತದೆ. ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯು ಪ್ರಾರಂಭವಾಗುವವರೆಗೆ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ದಿನಾಂಕ: 17.2.2011 ರಂದು ಲೆಕ್ಕಶೀರ್ಷಿಕೆ: 3054

(ಯೋಜನೇತರ) ಅಡಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ರೂ. 510.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪೂರಕ ಟಿಪ್ಪಣಿ

ವಿಧಾನಸಭಾ ಸದಸ್ಯರಾದ ಶ್ರೀ ತುಕಾರಾಮ್ ಇ. (ಸಂಡೂರು) ಇವರು ಮಂಡಿಸಿದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 585ಕ್ಕೆ ಪೂರಕ ಟಿಪ್ಪಣಿ

ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆ ಸಂಪೂರ್ಣ ಹದಗೆಟ್ಟು, ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ವಿವಿಧ ಲೆಕ್ಕಶೀರ್ಷಿಕೆವಾರು ಡಾಂಬರೀಕರಣಕ್ಕೆ ಪಾವತಿಯಾಗಿರುವ ವಿವರಗಳು ಈ ಕೆಳಗಿನಂತೆ ಇವೆ:

ಕ್ರ. ಸಂ.	ಅನುಮೋದನೆ ಯಾದ ವರ್ಷ	ಯೋಜನೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ
1	2009–10	5054–ಇತರ ರಸ್ತೆ ನಿರ್ಮಾಣ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 20.00 ರಿಂದ 24.00	50.00
2	2009–10	5054–ವಿಶೇಷ ಅಭಿವೃದ್ಧಿ ಯೋಜನೆ–ಇತರ ರಸ್ತೆಗಳ ನಿರ್ಮಾಣ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 0.00 ರಿಂದ 1.00	62.01

ಕ್ರ ಸಂ.	ಅನುಮೋದನೆ ಯಾದ ವರ್ಷ	ಯೋಜನೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ
3	2009–10	5054–ಸುವರ್ಣ ರಸ್ತೆ ವಿಕಾಸ ಯೋಜನೆ	ಸಂಡೂರು–ಸಿರುಗುಪ್ಪ ರಸ್ತೆ ಕಿ.ಮೀ. 24.00 ರಿಂದ 26.00	104.16

ಅಲ್ಲದೇ 2010–11ನೇ ಸಾಲಿನ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಸದರಿ ರಸ್ತೆ ಸುಧಾರಣೆಗೆ ರೂ. 90.65 ಕೋಟಿಗಳ ಮೊತ್ತಕ್ಕೆ ಟೆಂಡರ್‌ನ್ನು 2010–11ನೇ ಸಾಲಿನಲ್ಲಿ ಆಹ್ವಾನಿಸಲಾಗಿದ್ದು, ಟೆಂಡರ್‌ಗಳು ಅನುಮೋದನೆ ಹಂತದಲ್ಲಿವೆ.

ಶ್ರೀ ತುಕಾರಾಮ್ ಇ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಾನು ರಾಜ್ಯ ಹೆದ್ದಾರಿ–49 ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆಯಲ್ಲಿ ದುರಸ್ತಿ ಕಾಣದೆ ಕಳೆದ ಒಂದೂವರೆ ವರ್ಷದಿಂದ ವಾಹನ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ಅಲ್ಲಿ ಸುಮಾರು ಒಂದೂವರೆ ವರ್ಷದಿಂದ ಸಂಚಾರ ಸ್ಥಗಿತಗೊಂಡಿದೆ. ಅಲ್ಲಿ ರಸ್ತೆಯನ್ನು ದುರಸ್ತಿಗೊಳಿಸಲು ಏನೇನು ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದರೆ 2009–10ನೇ ಸಾಲಿನಲ್ಲಿ 20–24 ಕಿ. ಮೀ.ವರೆಗೆ 50 ಲಕ್ಷ ರೂಪಾಯಿ, ಅದೇ ವರ್ಷದಲ್ಲಿ 5054 ಹೆಡ್‌ನಲ್ಲಿ 62.01 ಲಕ್ಷ ರೂಪಾಯಿ ಹಾಗೂ 1,04 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಅದರ ಜೊತೆಗೆ 3054 ಹೆಡ್‌ನಲ್ಲಿ 510.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಈ ಸದನಕ್ಕೆ ಅಧಿಕಾರಿಗಳು ಮಾನ್ಯ ಸಚಿವರ ಮೂಲಕ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅಲ್ಲಿ ಒಂದೂವರೆ ವರ್ಷದಿಂದ ಸಂಚಾರ

ಸ್ಥಗಿತಗೊಂಡಿದೆ. ಸಂಡೂರಿನಿಂದ–ಹೊಸಪೇಟೆಗೆ ಕೇವಲ 28 ಕಿ.ಮೀ. ಇದ್ದು, ಈಗ via ತೋರಣಗಲ್ಲಿನಿಂದ 62 ಕಿ.ಮೀಟರ್‌ವರೆಗೆ ಸಂಚಾರ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಪ್ರಶ್ನೆ ಮಾಡಿದಾಗ ಇವರು state highway 40ಕ್ಕೆ 510 ಲಕ್ಷ ರೂಪಾಯಿ ಕೊಟ್ಟಿರುವುದನ್ನು state highway 49ಕ್ಕೆ ಎಂದು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಈ ರೀತಿ ತಪ್ಪು ಮಾಹಿತಿಯನ್ನು ಕೊಡಬಾರದು. ಕೇವಲ 62 ಲಕ್ಷ ರೂಪಾಯಿ ಮಾತ್ರ ಈವರೆಗೆ ಇವರು sanction ಮಾಡಿರುವುದು. ಅಲ್ಲಿ ಕೇವಲ 400 ಮೀಟರ್ ರಸ್ತೆ ಮಾಡಿದ್ದಾರೆ.

ಅಧ್ಯಕ್ಷರು: ನೀವು ಪ್ರಶ್ನೆ ಕೇಳಿ, ನೀವು ಹೇಳಿದ್ದನ್ನೇ ಹೇಳುತ್ತೀರಲ್ಲ. ಅವರು ಉತ್ತರ ಹೇಳಲಿ. ನೀವು ಮತ್ತೆ ಮತ್ತೆ repeat ಮಾಡಬೇಡಿ.

ಶ್ರೀ ತುಕಾರಾಮ್ ಇ: ನಾನು ಕೇಳಿದಾಗ PPP systemನಲ್ಲಿ ಆಗಿದೆ ಎಂದು ಹೇಳುತ್ತಿದ್ದು, ಅಲ್ಲಿ ರಸ್ತೆ ದುರಸ್ತಿಗೊಂಡಿಲ್ಲ. ಅಲ್ಲಿ ಒಂದೂವರೆ ವರ್ಷದಿಂದ ಸಂಚಾರ ಸ್ಥಗಿತಗೊಂಡಿದ್ದರಿಂದ ವಿದ್ಯಾಭ್ಯಾಸ ಮತ್ತು ಆರೋಗ್ಯ ವಿಷಯವಾಗಿ ಇಡೀ ಸಂಡೂರು ಜನತೆಗೆ ಒಂದು ಮಾರಕವಾಗಿ ಪರಿಣಮಿಸಿದೆ. ಈಗಾಗಲೇ ಅಲ್ಲಿ ಒಂದು ವಾಹನಕ್ಕೆ 500 ರೂಪಾಯಿ ಟೋಲ್ ಕಲೆಕ್ಷನ್ ಮಾಡುತ್ತಿದ್ದಾರೆ. ಅದರಿಂದ 6 ಕೋಟಿ ರೂಪಾಯಿಯ estimate ಅನ್ನು ದಿನಾಂಕ: 18.03.2010ರಲ್ಲಿ ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ. ಈಗ ಏನು 19 ಕೋಟಿ ರೂಪಾಯಿ ಟೋಲ್ ಕಲೆಕ್ಷನ್ ಆಗಿದೆ, ಅದರಲ್ಲಿ ಆರು ಕೋಟಿ ರೂಪಾಯಿಗಳಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡಿ ತಕ್ಷಣ ಜನಜೀವನ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತುಕಾರಾಮ್‌ರವರು this is not the first time he is asking question about this particular

road. ಇದು ಮೂರನೇ ಬಾರಿ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನೀವು ಕಳೆದ ಸಾರಿ ಭರವಸೆಯನ್ನು ಕೊಟ್ಟಿದ್ದಿರಿ. ಮಾರ್ಚ್ 10, 2010ರಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅವರು ಆಗ ಪ್ರಶ್ನೆಯನ್ನು ಕೇಳಿದಾಗ ನಾನು ಕೂಡ intervene ಆಗಿ ನಿಮಗೆ request ಮಾಡಿದ್ದೆನು. ಅವರು ಸಂಡೂರಿನಿಂದ–ಹೊಸಪೇಟೆಗೆ 29 ಕಿ.ಮೀ. ಉದ್ದ ಇದೆ. ನೀವು ಸಂಡೂರು–ಹೊಸಪೇಟೆ ವಿಚಾರ ಬಿಟ್ಟು ಸಂಡೂರು–ಸಿರಗುಪ್ಪ ಎಂದು ಉತ್ತರ ಕೊಟ್ಟಿದ್ದೀರಿ. ಅವರು ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆಯಲ್ಲಿ ದುರಸ್ತಿ ಕಾಣದೆ ಕಳೆದ ಒಂದೂವರೆ ವರ್ಷದಿಂದ ವಾಹನ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಬಂದಿದೆ ಎಂದು ಹೇಳಿದ್ದಾರೆ. ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿರುವುದಕ್ಕೆ ಕಾಮಗಾರಿಯ ಹೆಸರು ಮತ್ತು 2009–10ರಲ್ಲಿ 5054ರ ಹೆಡ್‌ನಲ್ಲಿ ಸಂಡೂರು–ಸಿರಗುಪ್ಪ ರಸ್ತೆಗೆ ಕಿಮೀ. 20 ರಿಂದ 24 ಕಿ.ಮೀ. ಎಂದು ಉತ್ತರ ಕೊಟ್ಟಿದ್ದೀರಿ, ಅವರು ಈ ಪ್ರಶ್ನೆಯನ್ನು ಕೇಳಿದ್ದಾರಾ? 2009–10ರಲ್ಲಿ 5054ರ ಹೆಡ್‌ನಲ್ಲಿ ಸಂಡೂರು–ಸಿರಗುಪ್ಪ ರಸ್ತೆ 62 ಲಕ್ಷ ರೂಪಾಯಿ ಎಂದು ಕೊಟ್ಟಿದ್ದೀರಿ. ಮತ್ತೆ 2009–10ರಲ್ಲಿ 5054ರ ಹೆಡ್‌ನಲ್ಲಿ ಸಂಡೂರು–ಸಿರಗುಪ್ಪ ರಸ್ತೆಯಲ್ಲಿ ಕಿಮೀ 24 ರಿಂದ 20 ರವರೆಗೆ 104 ಲಕ್ಷ ರೂಪಾಯಿಗಳು ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಅವರು ಕೇಳಿರುವ ಪ್ರಶ್ನೆಗೂ ನಿಮ್ಮ ಉತ್ತರಕ್ಕೂ ಏನಾದರೂ ಸಂಬಂಧ ಇದೆಯಾ? ಅವರು ಕೇಳಿರುವ ಪ್ರಶ್ನೆ very particular from Sandur to Hospet. ಅದು ಕಳೆದ ಒಂದೂವರೆ ವರ್ಷದಿಂದ ರಸ್ತೆ ಹಾಳಾಗಿ ಅಲ್ಲಿ ಯಾರೂ ತಿರುಗಾಡುವುದೇ ಇಲ್ಲ ಅಷ್ಟು ಕೆಟ್ಟು ಹೋಗಿದೆ, ಸಂಚಾರ ಸ್ಥಗಿತವಾಗಿದೆ ಎಂದು ಅದರ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಉದಾಸಿಯವರೇ ನಾನು ನಿಮಗೆ ಹೇಳಿದೆ ನೀವು ಅಲ್ಲಿ ಹೋಗಿಲ್ಲ. ನೀವು ಅಲ್ಲಿ ಹೋಗಿ ರಸ್ತೆ ನೋಡಿಕೊಂಡು ಬಂದು ಇಲ್ಲಿ ಉತ್ತರ ಕೊಟ್ಟಿದ್ದರೆ

ಚೆನ್ನಾಗಿ ಇರುತ್ತಿತ್ತು. ಅಲ್ಲಿ ರಸ್ತೆ ಬಹಳ ಕೆಟ್ಟುಹೋಗಿದೆ ಎಂದು ಹೇಳಿದ್ದೆನು. ನಾವು ಅಲ್ಲಿ ಹೋಗಬೇಕಾದ ಅಗತ್ಯವಿಲ್ಲ, ನನಗೆ ಎಲ್ಲಾ ಗೊತ್ತಿದೆ, ನಾನು ಎಲ್ಲಾ ಮಾಡುತ್ತೇನೆ ಎಂದು ಹೇಳಿದ ಹಾಗಾಯಿತು. ತಾವು ಇನ್ನೊಂದು ಏನು ಮಾಡಿದ್ದೀರೆಂದರೆ ನೂರು ಕೋಟಿ ರೂಪಾಯಿಗಳ ಅಭಿವೃದ್ಧಿ ರಸ್ತೆಗೆ ಅಡಿಗಲ್ಲು ಪೂಜೆಯನ್ನು ಮಾಡಿದ್ದೀರಿ. ಆ ರಸ್ತೆಯ ಕಾಮಗಾರಿಯನ್ನು ಇದುವರೆಗೂ ಏನಾದರೂ ಮಾಡಿದ್ದಿರಾ? ನೀವು ಅಲ್ಲಿ ಈಗ ರಿಪೇರಿ ಮಾಡಿದ್ದೇವೆ, ರಿಪೇರಿ ಮಾಡಿ ಸಂಚಾರ ಪ್ರಾರಂಭವಾಗಿದೆಯೆಂದು ಹೇಳಿಬಿಡಿ. ಆ ರೀತಿ ಆಗಿದೆಯೋ, ಇಲ್ಲವೊ ಎಂಬುದನ್ನು ನೋಡಲು ಇಲ್ಲಿ ಒಂದು ಸಮಿತಿ ಮಾಡಿ ನೋಡೋಣ. ನೀವು ಸುಮ್ಮನೆ ಇಂಥ ಕೆಟ್ಟಿರುವ ರಸ್ತೆ ಇದು ಅಲ್ಲಿಂದ ಹೊಸಪೇಟೆಗೆ ಹೋಗಿ National Highwayಗೆ ಸೇರುತ್ತದೆ. ಅಲ್ಲಿ ಬಹಳಷ್ಟು ನಿಮ್ಮ ಮೈನಿಂಗ್ ಲಾರಿಗಳು ಪ್ರತಿ ದಿವಸವೂ ಓಡಾಡುತ್ತವೆ. ಈ ಮೈನಿಂಗ್‌ನಿಂದ ಕೋಟ್ಯಾಂತರ ರೂಪಾಯಿಗಳ ಅದಾಯ ಬರುತ್ತದೆ. ಈ ಹಣವನ್ನು ರಸ್ತೆಯ ರಿಪೇರಿಗಾದರೂ ಖರ್ಚು ಮಾಡಬೇಕಲ್ಲಾ, ಹೆಚ್ಚಿಗೆ ಹಣ ಬೇಕಾಗುತ್ತದೆ, 30–40 ಲಕ್ಷ ರೂ.ಗಳಲ್ಲಿ ಒಂದು ಕಿ.ಮೀ. ಅನ್ನು ಮಾಡುವುದಕ್ಕೆ ಆಗುವುದಿಲ್ಲ, ಕನಿಷ್ಟ 2 ಕೋಟಿ ರೂ.ಗಳು ಬೇಕಾಗುತ್ತದೆಂದು ಕಾಮಗಾರಿಯನ್ನು ಮುಂದೂಡುತ್ತಾ ಹೋದರೆ ಹೇಗೆ? ಅಲ್ಲಿ ಜನರು ಗಲಾಟೆ ಮಾಡಿದ್ದಾರೆ, ರಕ್ಷಣಾ ವೇದಿಕೆಯವರು ಚಳುವಳಿ ಮಾಡಿದ್ದಾರೆ, ಸಾರ್ವಜನಿಕರು ಚಳುವಳಿ ಮಾಡಿದ್ದಾರೆ, ಬೇರೆಯವರೆಲ್ಲಾ ಚಳುವಳಿ ಮಾಡಿದ್ದಾರೆ. ಎಲ್ಲಾ ಅಧಿಕಾರಿಗಳನ್ನು ಕೂಡ ಭೇಟಿ ಮಾಡಿ ಆಗಿದೆ. ಇಲ್ಲಿ ಸದನದಲ್ಲೂ ಸರ್ಕಾರದ ಗಮನವನ್ನು ಸೆಳೆದಾಗಿದೆ. ಇವರು ಈ ರೀತಿ ಉತ್ತರ ಕೊಟ್ಟರೆ ಹೇಗೆ? ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಜನರು ಓಟು ಹಾಕುವುದಿಲ್ಲವೆಂದು ಬಹಿಷ್ಕಾರ ಹಾಕಿದ್ದಾರೆ. ತಾವು ಈಗಾಗಲೇ ಪೂಜೆ ಮಾಡಿರುವುದರಿಂದ ಇದಕ್ಕೆ ಎಷ್ಟೇ ಹಣ ಖರ್ಚಾಗಲಿ ಅದನ್ನು ಸುಸ್ಥಿತಿಯಲ್ಲಿಡಬೇಕು ಮತ್ತು ಇದು ಅತ್ಯಂತ ಅವಶ್ಯಕವಾಗಿ

ಆಗಬೇಕಾಗಿರುವುದರಿಂದ ದಯಮಾಡಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಮತ್ತು ಇಷ್ಟು ದಿವಸಗಳಲ್ಲಿ ಮಾಡುತ್ತೇವೆಂಬ ಖಚಿತವಾದ ಉತ್ತರವನ್ನು ಸದನದಲ್ಲಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈ ರಸ್ತೆ ಹೆಸರಿನ ಬಗ್ಗೆ ಸ್ವಲ್ಪ ಗಮನಿಸಬೇಕಾಗಿದೆ. ಆ ರಸ್ತೆ ಹೆಸರು ಸಂಡೂರು–ಸಿರಗುಪ್ಪ ರಸ್ತೆ ಎಂದು ಇರುವಂಥದ್ದು. ಇಲ್ಲಿ ಸಂಡೂರು–ಹೊಸಪೇಟೆ ಮಧ್ಯೆ ಕೆಲಸವಾಗುತ್ತಿರುವಂಥದ್ದು ಕೆಲಸದ ಸಲುವಾಗಿ ಆಕ್ಷೇಪಗಳು ಇರುವುದು

ಶ್ರೀ ಸಿದ್ದರಾಮಯ್ಯ: ಇವು ಈ ಕಡೆಗೆ ಆ ಕಡೆಗೆ ಇದೆ.

ಶ್ರೀ ಸಿ.ಎಂ. ಉದಾಸಿ: ಆ ರಸ್ತೆಯ ಹೆದ್ದಾರಿಯ ಹೆಸರು ಆಗಿದೆ. ಅದಕ್ಕೆ ನಾನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವು ಕೊಟ್ಟು ಮತ್ತೆ ಅದನ್ನು ಸಿರಗುಪ್ಪ ರಸ್ತೆಗೆ ಹಾಕಿ ಬಿಟ್ಟಿರಬೇಕು ನೋಡಿ.

ಶ್ರೀ ಸಿ.ಎಂ. ಉದಾಸಿ: ಈ ರಸ್ತೆಗೆ ಮಾಡುತ್ತಿದ್ದೇವೆ.

ಶ್ರೀ ಇ. ತುಕಾರಾಮ್: ಅದು ಹೊಸಪೇಟೆ ಬಾರ್ಡರ್‌ಗೆ ಸರ್, ನಮಗಲ್ಲ. ನಮ್ಮ ಬಾರ್ಡರ್‌ಗೆ ಕೇವಲ 62 ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ತಾವು ಅಧಿಕಾರಿಗಳ ಹತ್ತಿರ ಸರಿಯಾದ ಮಾಹಿತಿಯನ್ನು ತೆಗೆದುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ: ಇದು ರಾಜ್ಯ ರಸ್ತೆ ಹೆದ್ದಾರಿ ಹೆಸರಾಗಿದೆ.

ಶ್ರೀ ಇ. ತುಕಾರಾಮ್: ತಮಗೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಕೇವಲ ನಮಗೆ 62 ಲಕ್ಷ ರೂ.ಗಳು ಮಾತ್ರ ಬಂದಿದೆ. ಅದೆಲ್ಲಾ ಹೊಸಪೇಟೆ ರಸ್ತೆಗೆ ಬರುತ್ತಿರುವುದು, ಇದೆಲ್ಲಾ ಸೇರಿ total ಸಂಡೂರುನಿಂದ ಹೊಸಪೇಟೆ 28 ಕಿ.ಮೀ. ಇದೆ. ಸುಮಾರು 15 ವರ್ಷಗಳಿಂದ ರಿಪೇರಿ ಆಗಿಲ್ಲ.

ಶ್ರೀ ಸಿ.ಎಂ. ಉದಾಸಿ: ಈಗ 15 ವರ್ಷಗಳ ವಿಷಯ ಬೇಡ. ನಾನು ಏನು ಹೇಳುವುದೇನೆಂದರೆ ಸಂಡೂರು ಹೊಸಪೇಟೆ ಮಧ್ಯೆ ಆಗಬೇಕಾಗಿರುವಂಥ ರಸ್ತೆ ಏನು ಇದೆ, ಇದರಲ್ಲಿ 7 meter widthನ ಕಾಂಕ್ರೀಟ್ ರಸ್ತೆಯನ್ನು ಮಾಡಿ 96 ಕೋಟಿ ರೂ.ಗಳಿಗೆ ಟೆಂಡರ್ ಅನ್ನು ಕರೆದಾಗಿದೆ, ಒಂದು ಏಜೆನ್ಸಿ fix ಆಗುತ್ತಿದೆ. ಇದನ್ನು ಅವರಿಗೆ ಅವಾರ್ಡ್ ಮಾಡಿ, ನಾವು ಅವರಿಗೆ ಆರ್ಡರ್ ಕೊಡುತ್ತಿದ್ದೇವೆ. ಇದು ಕೆಲವೇ ದಿವಸಗಳಲ್ಲಿ ಅಂದರೆ ಒಂದು ತಿಂಗಳಲ್ಲಿ ಪ್ರಾರಂಭವಾಗಬಹುದೆಂದು ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಈ ಮಧ್ಯೆ ಪ್ರತಿ ಲಾರಿಗೆ 500 ರೂ.ಗಳಂತೆ ಟೋಲ್ ಹಾಕಿ 25 ಕೋಟಿ ರೂ.ಗಳನ್ನು collection ಮಾಡಿದ್ದು ಅಯಿತು. ಅದರಲ್ಲೆ 5 ಕೋಟಿ 10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ಸದ್ಯಕ್ಕೆ ತಾತ್ಕಾಲಿಕವಾಗಿ ರಿಪೇರಿ ಮಾಡಿದ್ದು, ಓಡಾಡುವುದಕ್ಕೆ ವ್ಯವಸ್ಥೆಯಾಗುವಂತೆ ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದೇವೆ. ಈಗ ಟೆಂಡರ್‌ಗೆ ಅವಾರ್ಡ್ ಆಗಿದೆ. ಅವಾರ್ಡ್ ಮಾಡಿ ಏಜೆನ್ಸಿ ಫಿಕ್ಸ್ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಉದಾಸಿಯವರೆ, you are a senior Minister.

ಶ್ರೀ ಇ. ತುಕಾರಾಮ್: ಅದು State High way 40ಗೆ ಕೊಟ್ಟಿರುವುದು, 49ಗೆ ಅಲ್ಲ, ಅದು ತೋರಣಗಲ್ಲು–ಸಂಡೂರು ರಸ್ತೆಗೆ ಇರುವುದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಚಿವರೆ, ನೀವು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟುಬಿಡಿ. 96 ಕೋಟಿ ರೂ.ಗಳಿಗೆ ಟೆಂಡರ್ ಕರೆದಿದ್ದೀರಿ. ಆ ಟೆಂಡರ್ ಅನ್ನು ಯಾವಾಗ finalize ಮಾಡುತ್ತೀರಿ? ನೀವು ಏಜೆನ್ಸಿಯನ್ನು ಯಾರಿಗಾದರೂ ಫಿಕ್ಸ್ ಮಾಡಿ, ಟೆಂಡರ್ ಯಾವಾಗ final ಮಾಡಿ ಏಜೆನ್ಸಿಯನ್ನು ಯಾವಾಗ ಫಿಕ್ಸ್ ಮಾಡುತ್ತೀರಿ? You are the Minister in charge of it. ತಾವು ಭರವಸೆ ಇದೆಯೆಂದು ಉತ್ತರವನ್ನು ಕೊಡುವುದಕ್ಕೆ

ಆಗುವುದಿಲ್ಲ. ಇಷ್ಟು ದಿವಸಗಳ ಒಳಗೆ ಟೆಂಡರ್ ಏಜೆನ್ಸಿ ಫಿಕ್ಸ್ ಆಗುತ್ತದೆಂದು ಹೇಳಿ. ನಾನು ಏನು ಹೇಳುವುದೇನೆಂದರೆ ಇವರು ಏಜೆನ್ಸಿಯನ್ನು ಯಾವಾಗ ಫಿಕ್ಸ್ ಮಾಡುತ್ತಾರೆ? ಟೆಂಡರ್ ಕರೆದು ಎಷ್ಟು ದಿವಸಗಳಾಯಿತು? ಟೆಂಡರ್‌ನ last date ಯಾವಾಗ? ಟೆಂಡರ್ ಅನ್ನು ಯಾವಾಗ open ಮಾಡುತ್ತಾರೆ? ಏಜೆನ್ಸಿಯನ್ನು ಯಾವಾಗ ಫಿಕ್ಸ್ ಮಾಡುತ್ತಾರೆ? ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: Political will ಇರುವಾಗ officers ಅನ್ನು ಕೇಳಿಕೊಂಡು ಕುಳಿತರೆ ಹೇಗೆ? ಇಂಥ ವಿಚಾರಗಳಿಗೆ ಇಷ್ಟೆಲ್ಲಾ ಡಿಮಾಂಡ್ ಇದೆ.

ಶ್ರೀ ಸಿದ್ದರಾಮಯ್ಯ: ಕಳೆದ ಬಾರಿ ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: 15 ದಿವಸಗಳಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ, ಒಂದು ತಿಂಗಳಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸಿ ಎಂದು ಹೇಳುವಷ್ಟು ಧೈರ್ಯ ಈ ಸರ್ಕಾರಕ್ಕೆ ಇಲ್ಲವಲ್ಲಾ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಮುಖ್ಯಮಂತ್ರಿಯವರೆ, ತಾವೇ ಇದಕ್ಕೆ ಉತ್ತರವನ್ನು ಕೊಡಿ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈ ಕಾಮಗಾರಿಗೆ ಟೆಂಡರ್ open ಆಗಿದೆ. ಇದಕ್ಕೆ Cabinet approvalಗೋಸ್ಕರ wait ಮಾಡುತ್ತಿದ್ದೇವೆ. ಇಲ್ಲಿ ಒಪ್ಪಿಗೆ ಸಿಕ್ಕ ತಕ್ಷಣ ಚಾಲನೆ ಕೊಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಯಾವಾಗ?

ಶ್ರೀ ಸಿ.ಎಂ. ಉದಾಸಿ: Next Cabinetಗೆ ಬರಬಹುದು.

ಶ್ರೀ ಸಿದ್ದರಾಮಯ್ಯ: ಪ್ರತಿ ವಾರ Cabinet ಇದೆಯಲ್ಲವೇ? Next Cabinetನಲ್ಲಿ approval ಮಾಡಿ, ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಸಿ.ಎಂ. ಉದಾಸಿ: ಏಪ್ರಿಲ್ 15ನೇ ತಾರೀಖಿನೊಳಗೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಏಪ್ರಿಲ್ ತಿಂಗಳವರೆಗೂ ಸಮಯ ಏಕೆ ಬೇಕು?

ಶ್ರೀ ಸಿ.ಎಂ. ಉದಾಸಿ: ಅದು ಆಗಬೇಕಲ್ಲಾ. ..

ಶ್ರೀ ಸಿದ್ದರಾಮಯ್ಯ: ಹೊಸ ವರ್ಷಕ್ಕೆ ಇದನ್ನು ಮಾಡಬೇಕಾಗಿಲ್ಲ. No, it need not be. ಮುಂದಿನ ಆರ್ಥಿಕ ವರ್ಷಕ್ಕೆ ಪ್ರಾರಂಭ ಮಾಡಬೇಕಾಗಿಲ್ಲ, ಈಗಲೇ ಮಾಡಬಹುದು. ಈಗ ಮಾರ್ಚ್ ತಿಂಗಳ ಒಳಗೆ ಮಾಡಬಹುದು.

ಶ್ರೀ ಸಿ.ಎಂ. ಉದಾಸಿ: ಏಪ್ರಿಲ್ 15ನೇ ತಾರೀಖಿನೊಳಗೆ ಪ್ರಾರಂಭ ಮಾಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಇಲ್ಲ, No, no, it is not correct. ಇದನ್ನು ಮಾರ್ಚ್ ತಿಂಗಳೊಳಗೆ ಮಾಡಿ. Why do you want so much time?

ಶ್ರೀ ಸಿ.ಎಂ. ಉದಾಸಿ: ಸಮಯ ಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ಏಕೆಂದು ಹೇಳಿ, ನಾನು Finance Minister ಆಗಿದ್ದೆ. ತಾವು ಏಕೆ ಅಷ್ಟು ಸಮಯ ಬೇಕೆಂದು ಹೇಳಿ.

ಶ್ರೀ ಸಿ.ಎಂ. ಉದಾಸಿ: ಆ process ಎಲ್ಲಾ ಮುಗಿಸಿ, ಏಪ್ರಿಲ್ 15ನೇ ತಾರೀಖಿನೊಳಗೆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ.

ಅಧ್ಯಕ್ಷರು: ತಾವು ಈ ರೀತಿ ಒತ್ತಡ ಹೇರಿದರೆ ಹೇಗೆ? ಈ ರೀತಿ ಒತ್ತಡ ಹೇರುವುದಕ್ಕೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ: ದಯವಿಟ್ಟು ತಾವು ಈ ರಸ್ತೆ ಬಗ್ಗೆ ಆಸಕ್ತಿಯನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ.ಎಂ. ಉದಾಸಿ: ತೆಗೆದುಕೊಂಡಿದ್ದೇನೆ, ಟೆಂಡರ್ ಆಗಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಯವರೆ, ಕಳೆದ ಬಾರಿ ಉತ್ತರವನ್ನು ಕೊಟ್ಟಿದ್ದೀರಿ.

ಶ್ರೀ ಸಿ.ಎಂ. ಉದಾಸಿ: ಟೆಂಡರ್ ಆಗಿದೆ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಉದಾಸಿಯವರೆ, ರಸ್ತೆ ವಿಷಯದಲ್ಲಿ ಏಪ್ರಿಲ್ ತಿಂಗಳು ಎಂದು ಹೇಳಬೇಡಿ, ನೀವು ಇಲ್ಲಿ ಪೂಜೆಯನ್ನು ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಅಭಿವೃದ್ಧಿ ಎಂದು ಹೇಳುತ್ತೀರಿ, ಇದನ್ನೇ ನೀವು ಮಾಡುವುದು? ನೀವು ನಾಳೆ ಶನಿವಾರದಂದು ಕಾರಿನಲ್ಲಿ ಸಂಡೂರು–ಹೊಸಪೇಟೆ ರಸ್ತೆಗೆ ಹೋಗಿ ಬನ್ನಿ. ಅಲ್ಲಿ ನಿಮ್ಮ ಕಾರು ಹೋಗಿ ಬಿಟ್ಟರೆ ನಾನು ನೀವು ಹೇಳಿದ ಹಾಗೆ ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ: ನಾನು ಏಪ್ರಿಲ್ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿಸುತ್ತೇನೆ. ಇದರ ಬಗ್ಗೆ ಎರಡು ಮಾತಿಲ್ಲ.

ಅಧ್ಯಕ್ಷರು: ಅಯಿತು. ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ಕೊಡಗಿನವರು ನಿಮಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು: ನಮ್ಮಲ್ಲಿ ರಸ್ತೆಗಳು ಅದಕ್ಕಿಂತ ಚೆನ್ನಾಗಿದೆ.

ಶ್ರೀ ಸಿದ್ದರಾಮಯ್ಯ: ನಿಮ್ಮಲ್ಲಿ ರಸ್ತೆಗಳು ಚೆನ್ನಾಗಿ ಇಲ್ಲದೇ ಇರಬಹುದು. ಸಂಡೂರು ಎಂದರೆ ಯಾರು ಹೆಣ್ಣು ಕೊಡುವುದಿಲ್ಲ. ಒಂದು ಕಡೆ ಲಾರಿಗಳು ಓಡಾಡುವುದರಿಂದ ಕೆಂಪು ಧೂಳು ಇರುತ್ತದೆ. ರಸ್ತೆ ಪೂರ್ತಿ ಕೆಂಪಾಗಿದೆ, ಹಾಕಿಕೊಂಡಿರುವ ಬಟ್ಟೆ ಎಲ್ಲಾ ಕೆಂಪಾಗುತ್ತದೆ. ಅಲ್ಲಿ ಮೈನಿಂಗ್ ಲಾರಿಗಳ ಓಡಾಟದಿಂದ ರಸ್ತೆ ಎಲ್ಲಾ ಕಿತ್ತು ಹೋಗಿವೆ. ಮಾನ್ಯ ಶ್ರೀರಾಮುಲುರವರೆ ಹೇಳಿ.

ಅಧ್ಯಕ್ಷರು: ಅಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಹಿರಿಯ ಸಚಿವರಾದ ಉದಾಸಿಯವರು ಉತ್ತರ ಕೊಟ್ಟಿದ್ದಾರೆ. ಈ ರಸ್ತೆ ಹಾಳಾಗಿರುವುದು ನಿಜ, ಆದಷ್ಟು ಬೇಗ ಈ ಕೆಲಸವನ್ನು ತೆಗೆದುಕೊಂಡು ಮುಂದಿನ ಸಾರಿ ನೀವು ಇಲ್ಲಿ ಬಂದು ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚಿತವಾಗಿಯೇ ಕೆಲಸ ಪ್ರಾರಂಭ ಮಾಡಿಸಿರುತ್ತೇನೆ. ತಾವು ದಯವಿಟ್ಟು ಸಹಕಾರ ಕೊಡಿ.

ಅಧ್ಯಕ್ಷರು: ದಿನಾಂಕ: 25.2.2011ರ ಪ್ರಶ್ನೆಗಳು, ಶ್ರೀ ರಮೇಶ್ ಬಂಡಿಸಿದ್ದೇಗೌಡರು.

ನಿರ್ದೇಶಕರ ನೇಮಕ

1 (28) ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ): ಮಾನ್ಯ ಸಹಕಾರ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇಮಕ ಮಾಡಬೇಕಾದ ಪ್ರಾಧಿಕಾರ ಯಾವುದು ? ಹಾಗೂ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿಗಳನ್ವಯ ಯಾರ್ಯಾರನ್ನು ನೇಮಕ ಮಾಡಬೇಕು ;